


ಸೂಳೆಪುರ ಎಂಬ ಈ ಊರಿನಲ್ಲಿ ಹುಟ್ಟಿದ ತಪ್ಪಿಗೆ ಊರಿನ ಸಕಲರಿಗೂ ಒಂದಲ್ಲ ಒಂದು ರೀತಿ, ಒಂದಲ್ಲ ಒಂದು ಸಂದರ್ಭದಲ್ಲಿ, ಈ ಘನ ಹೆಸರಿನಿಂದಾಗಿ ಮುಜುಗರ ಮತ್ತು ಅವಮಾನಗಳು ಆಗುತ್ತಲೇ ಇದ್ದವು. ಈ ಪ್ರಾರಬ್ಧದಿಂದ ಅಂತೂ ಬಚಾವಾಗುವ ದಿನ ಬಂದಿತೆಂದು ಎಲ್ಲರೂ ಸಂಭ್ರಮದಿಂದ ಊರ ಪಂಚಾಯಿತಿಯವರು ಕರೆದಿದ್ದ ಸಭೆಗೆ ಬಂದಿದ್ದರು. ಪಂಚಾಯಿತಿ ಕಟ್ಟಡದ ಮುಂಭಾಗದಲ್ಲಿನ ಮೈದಾನವು ಜನರಿಂದ ಕಿಕ್ಕಿರಿದು ತುಂಬಿದ್ದು ಮಾತ್ರವಲ್ಲದೆ, ಸುತ್ತಮುತ್ತ ಇದ್ದ ಮನೆಗಳ ಮೇಲಿನಿಂದ ಸಭೆಯ ಆಗುಹೋಗುಗಳನ್ನು ನೋಡಲು ಊರಿನ ಬಹುಪಾಲು ಜನ ಕಾತರದಿಂದ ಅಲ್ಲಿ ಸೇರಿದ್ದು ಆ ಊರಿನ ಹೆಸರ ಬದಲಾವಣೆಯ ಬಗ್ಗೆ ಜನರಿಗಿದ್ದ ಕಾತರವನ್ನು ಸೂಚಿಸುತ್ತಿತ್ತು.

ಈ ಊರಿಗೆ 'ಸೂಳೆಪುರ' ಎಂದು ಯಾವ ಮಹಾನುಭಾವ ನಾಮಕರಣ ಮಾಡಿದನೋ ಯಾರಿಗೂ ಗೊತ್ತಿರಲಿಲ್ಲವಾದರೂ, ಊರಿನ ಹಿರಿಯ ತಲೆ ತೊಂಬತ್ತರ ಹರೆಯದ ನಂಜರಾಜ ಹೇಳುವ ಪ್ರಕಾರ, ಈ ಊರಿನ ಹೆಸರು ಬಹಳ ಹಿಂದೆ, ಅಂದರೆ ರಾಜರ ಆಡಳಿತದ ಕಾಲದಲ್ಲಿ 'ಪುರ' ಎಂದು ಮಾತ್ರ ಇತ್ತೆಂದೂ, ತನ್ನ ಮುತ್ತಜ್ಜಿಯಿಂದಾಗಿ ಸೂಳೆಪುರ ಎಂಬ ಹೆಸರು ಬಂತೆಂದೂ ಯಾರು ಕೇಳದಿದ್ದರೂ ಹೇಳುತ್ತಿದ್ದ. ಆತ ಹೇಳುತ್ತಿದ್ದುದು ಎಷ್ಟು ನಿಜವೋ, ಎಷ್ಟು ಸುಳ್ಳೋ ಗೊತ್ತಿರಲಿಲ್ಲ. ಆತನ ಪ್ರಕಾರ ಅವನ ಮುತ್ತಜ್ಜಿಯಷ್ಟು ಸುಂದರಿ ಈ ಪ್ರಾಂತ್ಯದಲ್ಲೆಲ್ಲೂ ಇರಲಿಲ್ಲವಂತೆ. ಲಕ ಲಕ ಎಂದು ಹೊಳೆಯುತ್ತಿದ್ದ ಆಕೆ, ದಾರಿಯಲ್ಲಿ ನಡೆಯುತ್ತಾ ಹೋಗುತ್ತಿದ್ದರೆ ಯಾವುದೋ ದೇವಕನ್ಯೆ ಇರಬೇಕು ಎಂದುಕೊಳ್ಳುವಷ್ಟು ಸ್ನಿಗ್ಧ ಸೌಂದರ್ಯದಿಂದ ಕಂಗೊಳಿಸುತ್ತಿದ್ದಳಂತೆ. ಒಮ್ಮೆ ಯಾವುದೋ ಕಾರಣಕ್ಕೆ ಈ ಹಳ್ಳಿಯ ಮೂಲಕ ಹಾದು ಹೋಗುತ್ತಿದ್ದ ರಾಜ, ವಿಶ್ರಾಂತಿ ಪಡೆಯಲು ಈ ಹಳ್ಳಿಯಲ್ಲಿ ಸ್ವಲ್ಪ ಹೊತ್ತು ತಂಗಿದ್ದ ಸಮಯದಲ್ಲಿ ಈ ಚೆಲುವೆ ರಾಜನ ಕಣ್ಣಿಗೆ ಬಿದ್ದಳು. ಇವಳ ಅಪ್ರತಿಮ ಸೌಂದರ್ಯಕ್ಕೆ ಸೋತು, ಇವಳ ಪೋಷಕರನ್ನು ತಕ್ಷಣ ಕರೆಸಿ ಮಾತನಾಡಿ, ಇವಳು ತನಗೆ ಇಷ್ಟವಾಗಿರುವುದಾಗಿ ತಿಳಿಸಿದನಂತೆ. ನಾಡಿನ ರಾಜನೇ ಇವಳನ್ನು ಇಷ್ಟಪಟ್ಟಾಗ, ಅದನ್ನು ವಿರೋಧಿಸುವವರು ಯಾರು? ರಾಜನ ಇಚ್ಛೆಗೆ ವಿರುದ್ಧವಾಗಿ ಧ್ವನಿ ಎತ್ತಲು ಯಾರಿಗೂ ಧೈರ್ಯ ಇರಲಿಲ್ಲವಾಗಿ, ಈ ಸಂಬಂಧವನ್ನು ಒಪ್ಪಿಕೊಂಡರಂತೆ. ರಾಜನು ಅವಳನ್ನು ಶೀಘ್ರವಾಗಿ ಅರಮನೆಗೆ ಕರೆಸಿಕೊಳ್ಳುತ್ತೇನೆಂದು ಹೇಳಿ ಹಿಂದಿರುಗಿದನಂತೆ. ಇವರ ಸಂಬಂಧದ ಫಲವಾಗಿ ಅವಳ ಹೊಟ್ಟೆಯಲ್ಲಿ ರಾಜನ ಕುಡಿ ಮೊಳಕೆಯೊಡೆಯುತ್ತಿದ್ದ ಸಂದರ್ಭದಲ್ಲಿ ರಾಜನು ಕಾರಣಾಂತರಗಳಿಂದ ತೀರಿಕೊಂಡ. ರಾಜ ತೀರಿಕೊಂಡ ಸುಮಾರು ಏಳು ತಿಂಗಳ ನಂತರ ಮಗುವೊಂದು ಜನಿಸಿ, ಆ ಯುವತಿಯ ಕಡೆಯವರು ಜೀವನಾಂಶ ಕೇಳಲು ಮಗುವನ್ನು ಎತ್ತಿಕೊಂಡು ಅರಮನೆಯ ಹತ್ತಿರ ಹೋದಾಗ, ರಾಣಿಯು ಅವರನ್ನು ಕೀಳಾಗಿ ಕಂಡು, 'ರಾಜನು ಸತ್ತು ಒಂಬತ್ತು ತಿಂಗಳ ನಂತರ ಹುಟ್ಟಿದ ಮಗುವನ್ನು ರಾಜನದೆಂದು ಹೇಳಲು ನಿಮಗೆಷ್ಟು ಧೈರ್ಯ? ರಾಜನು ಪ್ರತೀ ಊರಿನಲ್ಲಿ ಒಬ್ಬೊಬ್ಬ ಸೂಳೆಯನ್ನಿಟ್ಟುಕೊಂಡಿರುತ್ತಾನೆ. ಹಾಗಂತ ಅವರೆಲ್ಲಾ ಯಾವ್ಯಾವುದೋ ಮಗುವನ್ನು ತೋರಿಸಿ, ಇದು ರಾಜನ ಕುಡಿ ಎಂದು ಹೇಳಿದರೆ ಅವರಿಗೆಲ್ಲಾ ರಾಜ್ಯ ಬರೆದುಕೊಡಲಾದೀತೇ? ಇನ್ನೊಂದು ಕ್ಷಣದಲ್ಲಿ ಜಾಗ ಖಾಲಿ ಮಾಡದೆ ಹೋದರೆ ನಿಮ್ಮನ್ನೆಲ್ಲಾ ರಾಜದ್ರೋಹದ ಆಪಾದನೆಯ ಮೇಲೆ ಕಾರಾಗೃಹಕ್ಕೆ ಅಟ್ಟುತ್ತೇನೆ' ಎಂದು ಅಬ್ಬರಿಸಿ ಅವರನ್ನೆಲ್ಲಾ ಅಲ್ಲಿಂದ ಓಡಿಸಿದಳಂತೆ. ಕೊನೆಗೆ ಆ ಯುವತಿಯನ್ನು ಅದೇ ಊರಿನ ಅವಳ ಸಂಬಂಧಿಕನೊಬ್ಬ ಮದುವೆಯಾದನಂತೆ. ಈ ವಿಷಯ ಆ ಪ್ರಾಂತ್ಯದಲ್ಲೆಲ್ಲಾ ಹರಡಿ, ಕೊನೆಗೆ ಆ ಊರಿನ ಹೆಸರು 'ಪುರ' ಎಂಬುದು ಕ್ರಮೇಣ ರಾಜನ ಸೂಳೆ ಇರುವ ಪುರ ಎಂದು ಬಾಯಿಂದ ಬಾಯಿಗೆ ಹರಡಿ, 'ಸೂಳೆಪುರ' ಎಂಬುದಾಗಿ